## ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಕೊಡಗು-ಮಡಿಕೇರಿ

## ಎಸ್.ಸಿ ಸಂಖ್ಯೆ: **59/2020**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಕವಿತ ಪಿ.ಎನ್ | ಫ್ರಾಸಾಃ 1 |
| ಗಂಡನ ಹೆಸರು | : | ಮಹೇಶ | ಚಾಸಾಃ 2 |
| ವಯಸ್ಸು | : | 34 ವರ್ಷ | |
| ವೃತ್ತಿ | : | ಕಂಪ್ಯೂಟರ್ ಆಪರೇಟರ್, DL ಕಛೇರಿ ಮಡಿಕೇರಿ | |
| ವಾಸ | : | ಕಡಗದಾಳು ಗ್ರಾಮ, ಮಡಿಕೇರಿ ತಾಲ್ಲೂಕು. | |

ಸಾಕ್ಷಿಯನ್ನು ದಿನಾಂಕ **09-01-2024** ರಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**ಮುಖ್ಯವಿಚಾರಣೆ: ಸರ್ಕಾರಿ ಅಭಿಯೋಜಕರಿಂದಃ**

2017 ರಿಂದ 2023 ರವರೆಗೆ ನಾನು ಕಡಗದಾಳು VSSN ಬ್ಯಾಂಕಿನಲ್ಲಿ ಕಂಪ್ಯೂಟರ್ ಆಪರೇಟರ್ ಆಗಿ ಕೆಲಸ ಮಾಡಿರುತ್ತೇನೆ. ಚಾಸಾ-1 ರವರು VSSN ಬ್ಯಾಂಕಿನಲ್ಲಿ ಮ್ಯಾನೇಜರ್ ಆಗಿದ್ದರು. ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನ ನಾನು ನೋಡಿರುತ್ತೇನೆ. 3 ವರ್ಷದ ಹಿಂದೆ ಆರೋಪಿಯನ್ನ ನೋಡಿರುತ್ತೇನೆ. ಆರೋಪಿ ಲೋನ್ ತೆಗೆದುಕೊಂಡಿದ್ದರು ಆ ಸಂಬಂಧವಾಗಿ ಅವರು ಬರುತ್ತಿದ್ದರು. ನಾನು 3 ವರ್ಷದ ಹಿಂದೆ ಮನೆಗೆ ಬೇಗ ಹೋಗಿದ್ದೆ, ಆಗ ಗಲಾಟೆ ಆಯಿತು ಎಂದು ನನಗೆ ಫೋನ್ ಮಾಡಿ ತಿಳಿಸಿದರು. ಆರೋಪಿ ಚಾಸಾ-1 ರವರಿಗೆ ಹೊಡೆದರು ಎಂದು ಮಾತನಾಡಿಕೊಳ್ಳುತ್ತಿದ್ದರು. ಯಾವುದರಿಂದ, ಯಾವ ವಿಷಯಕ್ಕೆ ಹೊಡೆದರು ಎಂದು ನನಗೆ ಗೊತ್ತಿಲ್ಲ. ಪೊಲೀಸರ ಮುಂದೆ ಈ ವಿಚಾರವಾಗಿ ನಾನು ಹೇಳಿಕೆ ನೀಡಿಲ್ಲ. ಆನಂತರ ಪೊಲೀಸರು ಸ್ಥಳಕ್ಕೆ ಬಂದಿದ್ದರು, ಸಹಿ ಮಾಡು ಎಂದು ಮಾಡಿಸಿಕೊಂಡರು. ಸದರಿ ದಾಖಲೆಗೆ ನಾನು ಸಹಿ ಮಾಡಿದ್ದು ಅದರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ಈಗ ನೋಡಿದ ಸಹಿ ನನ್ನದೇ ಇದ್ದು, ಸದರಿ ದಾಖಲೆ ನಿಪಿ-**1** ಎಂದು, ಅದರಲ್ಲಿರುವ ನನ್ನ ಸಹಿ ನಿಪಿ-**1**(ಎ) ಎಂದು ಗುರುತಿಸಲಾಯಿತು. ಪೊಲೀಸರಿಗೆ ನಾನು ಬೆರಳು ಮಾಡಿ ಏನನ್ನೋ ತೋರಿಸುತ್ತಿದ್ದೇನೆ. ಸದರಿ ಪೊಟೋವನ್ನ ನಿಪಿ-**2** ಎಂದು ಗುರುತಿಸಲಾಯಿತು.

**(ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಮಾನ್ಯ ಸರ್ಕಾರಿ ಅಭಿಯೋಜಕರು ಪಾಟೀಸವಾಲು ಮಾಡಲು ಅನುಮತಿ ಕೇಳಿದರು, ಅನುಮತಿ ನೀಡಲಾಯಿತು.)**

ಪಾಟೀಸವಾಲುಃ ಸರ್ಕಾರಿ ಅಭಿಯೋಜಕರಿಂದಃ

ದಿನಾಂಕ 11.11.2019 ರಂದು ನಾನು ಕಛೇರಿಯಲ್ಲಿ ಇದ್ದಾಗ ಆರೋಪಿ ಬಂದು ತನ್ನ ಸಾಲದ ಹಣದ ಬಾಬ್ತು ಬಾಕಿ ಎಷ್ಟು ಇದೆ ಎಂದು ಕೇಳಿದ್ದು, ಈ ಸಂಬಂಧ ನಾನು ಮಾಹಿತಿ ನೀಡಿದ್ದೆ, ಬ್ಯಾಂಕ್ ಮ್ಯಾನೇಜರ್ ರವರು ಚೆಕ್ ನೀಡಬೇಕು ಎಂದು ಆರೋಪಿಯನ್ನ ಕೇಳಿದಾಗ ಆತ ನಮ್ಮ ಕಛೇರಿಯಲ್ಲಿ ಇದ್ದ ಕತ್ತಿಯನ್ನ ತೆಗೆದುಕೊಂಡು ಆರೋಪಿ ಚಾಸಾ-1 ರವರ ತಲೆಗೆ ಹೊಡೆದು ಹಲ್ಲೆ ಪ್ರಯತ್ನ ಮಾಡಿದ್ದ, ನಾನೇ ಗಾಯಾಳುವನ್ನ ಆಸ್ಪತ್ರೆಗೆ ಕರೆದುಕೊಂಡು ಹೋದೆ ಎಂದು ಪೊಲೀಸರ ಮುಂದೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿಪಿ-**3** ಎಂದು ಗುರುತಿಸಲಾಯಿತು.

ಮಾರನೇ ದಿನ ಪೊಲೀಸರು ಸ್ಥಳಕ್ಕೆ ಬಂದಾಗ ಸದರಿಯವರಿಗೆ ನಾನೇ ಸ್ಥಳ ತೋರಿಸಿ ನ್ಯಾಯಾಲಯ ಮುಂದೆ ಇರುವ ಕತ್ತಿಯಿಂದಲೇ ಆರೋಪಿ ಹಲ್ಲೆ ಮಾಡಿದ್ದಾನೆ ಎಂದರೆ ನನಗೆ ಗೊತ್ತಿಲ್ಲ. ಘಟನೆ ವಿಚಾರ ನನಗೆ ಗೊತ್ತಿದ್ದರೂ ಸಹ ನಾನು ಈ ದಿನ ಆರೋಪಿ ಜೊತೆ ಬಂದಿದ್ದು ಆತನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀಸವಾಲು- ಆರೋಪಿ ಪರ ಶ್ರೀ. ಬಿ.ಡಿ.ಕೆ. ವಕೀಲರಿಂದಃ

ಇಲ್ಲ.

ಮರುವಿಚಾರಣೆಃ ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸಾ. ಸ. ಇ. ಎ. ಒ.

ಸಹಿ/-
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಕೊಡಗು-ಮಡಿಕೇರಿ.